**OS.No.**153/2022 **PW**-1

**ದಿನಾಂಕಃ 04.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ ವಾದಿಯ ಪರ ಶ್ರೀ. ಎ.ಎಸ್. ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿ ಹೇಳಿರುವ ಸಂಗತಿಗಳು ಸತ್ಯವಾಗಿರುತ್ತವೆ. ಅವುಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಸದರಿ ಅಂಶಗಳನ್ನು ವಕೀಲರಿಗೆ ನಾನೇ ಹೇಳಿ ಬರೆಸಿರುತ್ತೇನೆ.

ನಾನು ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಮಾಡಿದ್ದು ಅವುಗಳನ್ನು ನಿಶಾನೆಗಳಾಗಿ ಗುರುತಿಸಲು ಕೋರುತ್ತೇನೆ.

ಸಾಕ್ಷಿ ದಾಖಲಾತಿಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಈ ಕೆಳಗಿನಂತೆ ನಿಶಾನೆಯಾಗಿ ಗುರುತಿಸಲಾಯಿತು.

ದಿನಾಂಕಃ 02.03.1962ರ ಕ್ರಯ ಪತ್ರದ ದೃಢೀಕೃತ ನಕಲನ್ನು ನಿಪಿ 1 ಎಂದು, ದಿನಾಂಕಃ 13.12.1997ರ ಕ್ರಯ ಪತ್ರದ ದೃಢೀಕೃತ ನಕಲನ್ನು ನಿಪಿ 2 ಎಂದು, ದಿನಾಂಕಃ 24.08.2012 ರ ಕ್ರಯ ಪತ್ರದ ದೃಢೀಕೃತ ನಕಲನ್ನು ನಿಪಿ 3 ಎಂದು, ದಿನಾಂಕಃ 14.03.2013 ರ ಕ್ರಯ ಪತ್ರದ ದೃಢೀಕೃತ ನಕಲನ್ನು ನಿಪಿ 4 ಎಂದು, ದಿನಾಂಕಃ 20.01.2014 ರ ಕ್ರಯ ಪತ್ರದ ದೃಢೀಕೃತ ನಕಲನ್ನು ನಿಪಿ 5 ಎಂದು, ದಿನಾಂಕಃ 23.01.2014 ರ ಮೂಲ ಕ್ರಯ ಪತ್ರವನ್ನು ನಿಪಿ 6 ಎಂದು, ದಿನಾಂಕಃ 07.03.2014 ರ ಕ್ರಯ ಪತ್ರದ ದೃಢೀಕೃತ ನಕಲನ್ನು ನಿಪಿ 7 ಎಂದು, ದಿನಾಂಕಃ 14.02.2020 ರ ಆಧಾರ ಖುಲಾಸೆಯ ಮೂಲ ಪತ್ರವನ್ನು ನಿಪಿ 8 ಎಂದು, ಕಟ್ಟಡ ಪರವಾನಿಗೆಯನ್ನು ನಿಪಿ 9 ಎಂದು, ಬ್ಯಾಂಕ್ ಅಕೌಂಟ್ ಸ್ಟೇಟ್‌ಮೆಂಟ್ ಅನ್ನು ನಿಪಿ 10 ಎಂದು, ಲೀಗಲ್ ನೋಟಿಸಿನ ಕಚೇರಿ ಪ್ರತಿಯನ್ನು ನಿಪಿ 11 ಎಂದು, 4 ಅಂಚೆ ಸ್ವೀಕೃತಿಗಳನ್ನು ಕ್ರಮವಾಗಿ ನಿಪಿ 12 ರಿಂದ 15 ಎಂದು, 5 ಅಂಚೆ ರಶೀದಿಗಳನ್ನು ಕ್ರಮವಾಗಿ ನಿಪಿ 16 ರಿಂದ 20 ಎಂದು, ಜಾರಿಯಾಗದೇ ವಾಪಸ್ ಬಂದ ಅಂಚೆ ಲಕೋಟೆಯನ್ನು, ನಿಪಿ 21 ಎಂದು, ಅದರಲ್ಲಿರುವ ನೋಟಿಸನ್ನು ನಿಪಿ

21(ಎ) ಎಂದು, ಕರಾರು ಪತ್ರವನ್ನು ನಿಪಿ 22 ಎಂದು ಗುರುತಿಸಲಾಯಿತು. ಬೀಗದ ಕೀಯನ್ನು ಎಂ.ಓ. 1 ಎಂದು ಗುರುತಿಸಲಾಯಿತು.

ವಕೀಲರ ಕೋರಿಕೆಯ ಮೇರೆಗೆ ಮುಖ್ಯ ವಿಚಾರಣೆಗೆ ಸಮಯ ನೀಡಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.